<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>
<u>ಘನ ನ್ಯಾಯಾಲಯದಲ್ಲಿ</u>

<u>ಪ್ರಕರಣ ಸಂಖ್ಯೆಃ ಎಸ್.ಸಿ 26/2020</u>

ದಿನಾಂಕಃ 06.09.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 4 (ಚಾ.ಸಾ.4)

| | | |
|---|---|---|
| ಹೆಸರು | ಃ | ಮುಷಾ ಫೀರ್ |
| ತಂದೆಯ ಹೆಸರು | ಃ | ಸೈಯದ್ ಲಫೀಕ್ |
| ವಯಸ್ಸು | ಃ | 22 ವರ್ಷ |
| ಉದ್ಯೋಗ | ಃ | ವೆಲ್ಡಿಂಗ್ ಕೆಲಸ |
| ವಾಸ ಸ್ಥಳ | ಃ | ಚನ್ನಪಟ್ಟಣ |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಆರೋಪಿ ಸೈಯದ್ ಜಬೀರ್ ಗೊತ್ತು. ಫರಾನ್ ಮೆಹದಿ ನನ್ನ ತಮ್ಮ.

2. ತಾಃ 21.01.2020 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಸುಹೇಲಾ ನನಗೆ ಫೋನ್ ಮಾಡಿ ಆರೋಪಿ ಮತ್ತು ಫರಾನ್ ಮೆಹದಿಯ ನಡುವೆ ಜಗಳವಾಗಿ ಆರೋಪಿ ಫರಾನ್ ಮೆಹದಿಯ ಬೆರಳನ್ನು ಕತ್ತರಿಸಿದ್ದಾನೆ ಎಂದು ಹೇಳಿದನು. ನಂತರ ನಾನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋದೆನು. ಸದರಿ ಆಸ್ಪತ್ರೆಯಲ್ಲಿ ಫರಾನ್, ಸಿಮ್ಮು ಮತ್ತು ಸುಹೇಲ್ ಇದ್ದರು. ಫರಾನ ಎಡಗೈ ಹೆಬ್ಬೆರಳು ಕಟ್ಟಾಗಿತ್ತು. ಅಲ್ಲಿ ವೈದ್ಯರು ಬೇಗ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಅದರಂತೆ ವಿಕ್ಟೋರಿಯಾ ಆಸ್ಪತ್ರೆಗೆ ಫರಾನ್‌ನನ್ನು ಅಂಬ್ಯುಲೆನ್ಸನಲ್ಲಿ ನಮ್ಮ ಮಾವನೊಂದಿಗೆ ಕಳುಹಿಸಿಕೊಟ್ಟೆವು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**

3. ಮುಷದ್ದೀರ್ ನನ್ನ ಅಣ್ಣ. ನನ್ನ ಅಣ್ಣ ಮುಷದ್ದೀರ್ ಹಾಗು ಫರಾನ್ ಗಾಂಜಾ ಸೇದುತ್ತಾರೆ ಅಂದರೆ ಸಾಕ್ಷಿ ಫರಾನ್ ಸೇದುವುದಿಲ್ಲ, ಆದರೆ ನನ್ನ ಅಣ್ಣ ಮುಷದ್ದೀರ್ ಗಾಂಜಾ ಸೇದುತ್ತಾರೆ.

4. ನನ್ನ ಅಣ್ಣ ಗಾಂಜಾ ಸೇದುತ್ತಾನೆ ಎನ್ನುವ ವಿಚಾರವನ್ನು ಆರೋಪಿ ನಮ್ಮ ಮನೆಯವರಿಗೆ ಹೇಳಿದ್ದರಿಂದ ನಮ್ಮ ಮನೆಯವರು ನನ್ನ ಅಣ್ಣನಿಗೆ ಬೈದಿದ್ದರು ಅಂದರೆ ಸರಿಯಲ್ಲ.

5. ವೆಲ್ಡಿಂಗ್ ಕೆಲಸ ಮಾಡುವಾಗ ಆಕಸ್ಮಿಕವಾಗಿ ಯಂತ್ರಕ್ಕೆ ಬೆರಳು ಅಡ್ಡ ಬಂದಿದ್ದರಿಂದ ಫರಾದ್‌ನ ಬೆರಳು ಕತ್ತರಿಸಿ ಹೋಗಿರುತ್ತದೆ ಅಂದರೆ ಸರಿಯಲ್ಲ.

6. ಘಟನೆಯ ದಿನ ಸುಹೇಲ್ ಯಾವ ನಂಬರಿನಿಂದ ನನಗೆ ಫೋನ್ ಮಾಡಿದ್ದ ಎಂದು ನನಗೆ ಈಗ ಹೇಳಲಾಗುವುದಿಲ್ಲ ಅಂದರೆ ಸರಿ. ನಮ್ಮ ಮನೆಯಿಂದ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆ ಒಂದೂವರೆ ಕಿ.ಮೀ. ದೂರದಲ್ಲಿ ಇದೆ. ನಾನು ಫೋನ್‌ನಲ್ಲಿ ವಿಷಯ ತಿಳಿದ ನಂತರ ಘಟನೆಯ ದಿನ ರಾತ್ರಿ 12 ಗಂಟೆ ಹೊತ್ತಿಗೆ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು. ಅದೇ ದಿನ ನಾನು ಪೊಲೀಸರಿಗೆ ದೂರು ನೀಡಲಿಲ್ಲ.

7. ಘಟನೆಯ ದಿನವಾಗಲೀ ಅಥವಾ ಮಾರನೇಯ ದಿನವಾಗಲೀ ಪೊಲೀಸರಿಗೆ ದೂರು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಅಂದರೆ ಸರಿ.

8. ನನ್ನ ಅಣ್ಣ ಗಾಂಜಾ ಸೇವಿಸುವ ಬಗ್ಗೆ ಆರೋಪಿ ನಮ್ಮ ಮನೆಯವರಿಗೆ ಹೇಳಿದ್ದ ಎನ್ನುವ ದ್ವೇಷದಿಂದ ನಾನು ಮತ್ತು ನನ್ನ ಸಹೋದರರು ಸೇರಿ ಆರೋಪಿಯ ವಿರುದ್ಧ ಸುಳ್ಳು ಆರೋಪ ಹೊರೆಸಿದ್ದೇವೆ ಅಂದರೆ ಸರಿಯಲ್ಲ.

**9.** ಆರೋಪಿ ನನ್ನ ತಮ್ಮನಿಗೆ ಚಾಕುವಿನಿಂದ ಹೊಡೆದಿಲ್ಲವಾದರೂ ಸಹ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**